# ಸ್ವಾಮಿ ಶಾರದಾನಂದರ ನೆನಪುಗಳು

-ಸ್ವಾಮಿ ನಿಖಿಲಾನಂದ

ಅನುವಾದ:
ಡಾ. ಇ. ವಸಂತಕುಮಾರ್

ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಲ್ಲಿ ಒಬ್ಬರು. ರಾಮಕೃಷ್ಣ ಮಹಾಸಂಘದ ಮೊದಲ ಕಾರ್ಯದರ್ಶಿಗಳಾಗಿದ್ದು ಶ್ರೀಮಾತೆ ಶಾರದಾದೇವಿಯವರ ಯೋಗಕ್ಷೇಮವನ್ನು ನೋಡಿಕೊಂಡ ಶಾಂತತೆಯ ಪ್ರತಿಮೂರ್ತಿ. ವಿವೇಕಾನಂದರ ಆಣತಿಯನ್ನು ಹೊತ್ತು ನಡೆಸಿದ ಮಹಾಪುರುಷ. ಅವರ ನೆನಪುಗಳನ್ನು ಬರೆದಿರುವ ಸ್ವಾಮಿ ನಿಖಿಲಾನಂದರು ಶ್ರೀರಾಮಕೃಷ್ಣ ವಚನವೇದವನ್ನು ಇಂಗ್ಲೀಷಿಗೆ ಅನುವಾದಿಸಿದ ಅಗಾಧ ಪಂಡಿತರು. ಲೇಖನದ ಕನ್ನಡ ಅನುವಾದ ಬೆಂಗಳೂರಿನ ಭಕ್ತರಾದ ಡಾ. ವಸಂತಕುಮಾರ್ ಅವರದು.

**ಸ್ವಾಮಿ** ಶಾರದಾನಂದಜಿ ಮಹಾರಾಜರನ್ನು ಮೊದಲ ಬಾರಿ ಭೇಟಿ ಮಾಡುವ ಸುಯೋಗ ನನಗೆ ಪ್ರಾಪ್ತವಾದುದು ೧೯೧೬ ರಲ್ಲಿರಬೇಕು: ಅದು ಬೇಲೂರು ಮಠದಲ್ಲಿ ಅಥವಾ 'ಉದ್ಬೋಧನ' ದಲ್ಲಿರಬಹುದು. ಹಲವು ವರ್ಷಗಳಿಂದ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೊಬ್ಬರನ್ನಾದರೂ ನೋಡಬೇಕೆಂಬ ತೀವ್ರ ಹಂಬಲ ನನ್ನ ಮನಸ್ಸಿನಲ್ಲಿ ಮನೆಮಾಡಿತ್ತು. ನಾನು ಪೂರ್ವ ಬಂಗಾಳದ ನಿವಾಸಿಯಾಗಿದ್ದುದರಿಂದ ಈ ಹಂಬಲ ಕೈಗೂಡಿರಲಿಲ್ಲ. ನಾನು ವಿದ್ಯಾರ್ಥಿಯಾಗಿದ್ದಾಗ, ೧೯೧೨ ರಲ್ಲಿ, ಸ್ವಾಮಿ ಬ್ರಹ್ಮಾನಂದರು, ಪ್ರೇಮಾನಂದರು, ಶಂಕರಾನಂದರು, ಅಂಬಿಕಾನಂದರು, ಮಾಧವಾನಂದರು, ಮೋಹನ್ ಬಾಬು (ಸ್ವಾಮಿಜಿಯ ಸಹೋದರ) ಮತ್ತು ಶ್ರೀರಾಮಕೃಷ್ಣ ಸಂಘದ ಇನ್ನಿತರ ಅನೇಕ ಸದಸ್ಯರೊಂದಿಗೆ ಢಾಕಾಗೆ ಭೇಟಿಯಿತ್ತಾಗ ನನ್ನ ಈ ಕನಸು ಈಡೇರಿತು. ೧೯೧೬ ರ ರಜೆಯ ಸಮಯದಲ್ಲಿ ಬೇಲೂರು ಮಠದಲ್ಲಿ ತಂಗಲು ನನಗೆ ಅನುಮತಿ ನೀಡಬೇಕೆಂದು ನಾನು ಬಾಬುರಾಮ್ ಮಹಾರಾಜರಲ್ಲಿ ಕೇಳಿಕೊಂಡೆ. ಅವರು ಔದಾರ್ಯದಿಂದ ಒಪ್ಪಿಗೆಯಿತ್ತರು. ಮಠದಲ್ಲಿ ಸ್ವಲ್ಪ ಸಮಯ ಕಳೆಯುವ ಸದವಕಾಶ ನನಗೆ ದೊರೆಯಿತು. ಬಹುಶಃ ಆಗ ನಾನು ಸ್ವಾಮಿ ಶಾರದಾನಂದಜಿಯವರನ್ನು ಭೇಟಿ ಮಾಡಿದ್ದಿರಬೇಕು. ಆದರೆ ಅವರೊಂದಿಗೆ ಯಾವುದೇ ಸಂಭಾಷಣೆಯನ್ನು ಮಾಡಿದೆನೆಂಬ ನೆನಪು ನನಗಿಲ್ಲ.

೧೯೧೬ ರಲ್ಲಿ ಬಂಗಾಳದ ಕ್ರಾಂತಿ ಚಳುವಳಿಯೊಂದಿಗೆ ನನಗಿದ್ದ ಸಂಬಂಧಕ್ಕಾಗಿ ಬ್ರಿಟಿಷ್ ಸರ್ಕಾರ ನನ್ನನ್ನು ಬಂಧಿಸಿ, ಅಂತಹ ಬಂದಿಗಳ ಬಿಡಾರದಲ್ಲಿ ಸುಮಾರು ಎರಡು ವರ್ಷಗಳ ಕಾಲ ಇಟ್ಟಿತ್ತು. ಮೊದಲನೇ ಮಹಾಯುದ್ಧಕ್ಕೆ ಸ್ವಲ್ಪ ಮುಂಚೆ, ೧೯೧೮ ರಲ್ಲಿ, ನನ್ನ ಬಿಡುಗಡೆಯಾಯಿತು. ನಾನು ಕೊಲ್ಕತ್ತಾಕ್ಕೆ ಬಂದು ಶ್ರೀಮಾತೆಗೆ ಪ್ರಣಾಮ ಸಲ್ಲಿಸಲು 'ಉದ್ಬೋಧನ' ಕ್ಕೆ ಹೋದೆ. ಅವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಸಂದರ್ಶಕರನ್ನು ಒಳಗೆ ಬಿಡುತ್ತಿರಲಿಲ್ಲ. ಸ್ವಾಮಿ ಅರೂಪಾನಂದರೋ ಅಥವಾ ಸ್ವಾಮಿ ಅನುಭವಾನಂದರೋ ನನ್ನ ಬಗ್ಗೆ ಸ್ವಾಮಿ ಶಾರದಾನಂದರೊಡನೆ ಮಾತನಾಡಿ, ಶ್ರೀಮಾತೆಯವರ ಪಾದಧೂಳಿಯನ್ನು ಪಡೆಯುವುದಕ್ಕೆ ನಾನು ಉತ್ಸುಕನಾಗಿರುವ ಬಗ್ಗೆ ತಿಳಿಸಿದರು. ಸ್ವಾಮಿಗಳು ಕೃಪೆಮಾಡಿ ತಮ್ಮ ಅನುಮತಿ



ಸ್ವಾಮಿ ಶಾರದಾನಂದರು

ನೀಡಿ, ಶ್ರೀಮಾತೆಯೊಂದಿಗೆ ಕೆಲವು ನಿಮಿಷಗಳು ಮಾತ್ರ ಇರಬೇಕೆಂದು ಹೇಳಿದರು. ಮಾತೆಯವರ ಶಿಷ್ಯರಲ್ಲೊಬ್ಬರಾದ, ವಿಷ್ಣುಪುರದ ಸುರೇಂದ್ರಕರ್ ಎಂಬುವವರು, ಕಾರಾಗೃಹದಲ್ಲಿ ನನ್ನೊಂದಿಗೆ ಇದ್ದರು. ಬಂಧನದ ನಿರ್ಬಂಧಗಳನ್ನು ಸಹಿಸಲಾರದೆ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ದುಃಖಕರ ಸಂಗತಿಯನ್ನು ನಾನು ಶ್ರೀಮಾತೆಗೆ ತಿಳಿಸಿದಾಗ ಅವರು ತುಂಬು ವೇದನೆಯ ಧ್ವನಿಯಲ್ಲಿ ಹೇಳಿದರು: "ಓ ದೇವರೆ, ಈ ಸರ್ಕಾರದ ಇಂಥ ವಿಷಮ ವರ್ತನೆಯನ್ನು ನೀನು ಇನ್ನೆಷ್ಟು ಕಾಲ ಸಹಿಸುವೆ?" ಆ ಸಮಯದಲ್ಲಿ ನಾನು 'ಸ್ಮೃತಿ ಬಜ಼ಾರ್' ಪತ್ರಿಕೆಯ ಉದ್ಯೋಗದಲ್ಲಿದ್ದೆ. ಮತ್ತು ಬಾಗ್‌ಬಜ಼ಾರ್ ನಿವಾಸಿಯಾಗಿದ್ದೆ. ಸಾಮಾನ್ಯವಾಗಿ ಮಂಗಳವಾರ ಮತ್ತು ಶನಿವಾರಗಳಂದು 'ಉದ್ಬೋಧನ' ಕ್ಕೆ ಹೋಗಿ ಶ್ರೀಮಾತೆ ಮತ್ತು ಸ್ವಾಮಿ ಶಾರದಾನಂದಜಿಯವರ ದರ್ಶನ ತೆಗೆದುಕೊಳ್ಳುತ್ತಿದ್ದೆ. ಆ ಭೇಟಿಗಳಲ್ಲಿಯೂ ನಾನು ಅವರೊಡನೆ ವಿಶೇಷ ಸಂಭಾಷಣೆ

ನಡೆಸಿದಂತೆ ನೆನಪಿಲ್ಲ. ಆಗ ನಾನು ಬ್ರಹ್ಮಾನಂದರನ್ನು ಬಲರಾಮ್ ಬೋಸ್ ಅವರ ಮನೆಯಲ್ಲಿ ಎಷ್ಟು ಬಾರಿ ಸಾಧ್ಯವೋ ಅಷ್ಟು ಬಾರಿ ಭೇಟಿ ಮಾಡುತ್ತಿದ್ದೆ.

೧೯೨೧ ರ ಬೇಸಿಗೆಯಲ್ಲಿ ನಾನು ಸ್ವಾಮಿ ಶುದ್ಧಾನಂದ, ಮಾಧವಾನಂದ ಮತ್ತು ವೀರೇಶ್ವರಾನಂದರೊಡನೆ ಆಶ್ರಮದ ಅತಿಥಿಯಾಗಿ ಮಾಯಾವತಿಗೆ ಹೋದೆ. ಸ್ವಾಮಿ ಯತೀಶ್ವರಾನಂದರು ನಂತರ ಅಲ್ಲಿಗೆ ಬಂದರು ಮತ್ತು 'ಪ್ರಬುದ್ಧ ಭಾರತ'ದ ಸಂಪಾದಕರಾದರು. ಹಲವು ವಾರಗಳ ನಂತರ ಸ್ವಾಮಿ ಮಾಧವಾನಂದಜಿಯವರು ಒಂದು ದಿನ ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಇಂಗ್ಲಿಷ್‌ನಲ್ಲಿ ಬರೆಯುವಂತೆ ನನಗೆ ಹೇಳಿದರು. ಏಕೆಂದರೆ, ಆಗಿನ ದಿನಗಳಲ್ಲಿ ಗುರುಮಹಾರಾಜರ ಸಂಪೂರ್ಣ ಜೀವನಚರಿತ್ರೆ ಇನ್ನೂ ಪ್ರಕಟವಾಗಿರಲಿಲ್ಲ. ಬಂಗಾಳಿ ಭಾಷೆ ತಿಳಿಯದ ಗುರುಮಹಾರಾಜರ ಅನೇಕ ಭಕ್ತರು ಭಾರತದಲ್ಲಿ ಮಾತ್ರವಲ್ಲದೆ ಹೊರಗಡೆ ದೇಶಗಳಲ್ಲೂ ಇದ್ದರು. ಇಂತಹ ಕಠಿಣವಾದ ಕೆಲಸಕ್ಕೆ ಬೇಕಾಗುವ ಸಾಮರ್ಥ್ಯ ನನಗೆ ಇಲ್ಲವೆಂದು ಎಷ್ಟು ನಿವೇದಿಸಿಕೊಂಡರೂ ನನ್ನ ಮಾತನ್ನು ಕೇಳಲಿಲ್ಲ. ಬಳಿಕ ನಾನು ಜೀವನಚರಿತ್ರೆಯ ಕರಡು ಪ್ರತಿಯನ್ನು ಸಿದ್ಧಪಡಿಸಿದೆ. ಅದನ್ನು ಸ್ವಾಮಿ ಮಾಧವಾನಂದರು ಚೆನ್ನಾಗಿ ಪರಿಷ್ಕರಿಸಿದರು. ಗ್ರಂಥದ ಬಹುಭಾಗವನ್ನು ಸ್ವಾಮಿ ಶಾರದಾನಂದಜಿಯವರ ಅಭಿಜಾತ ಕೃತಿಯಾದ 'ರಾಮಕೃಷ್ಣ ಲೀಲಾಪ್ರಸಂಗ'ದಿಂದ ತೆಗೆದುಕೊಂಡು ಅದರಲ್ಲಿಲ್ಲದ ಕಾಶೀಪುರದ ತೋಟದ ಮನೆಯಲ್ಲಿನ ಗುರುಮಹಾರಾಜರ ಜೀವನದ ಮಾಹಿತಿಯನ್ನು ಅನೇಕ ಬಂಗಾಳಿ ಪುಸ್ತಕಗಳಿಂದ ಸಂಗ್ರಹಿಸಿದೆ. ಗ್ರಂಥದ ಪರಿಷ್ಕೃತ ಕರಡು ಬಹುಶಃ ೧೯೨೩ ರಲ್ಲಿ ಸಿದ್ಧವಾಯಿತು. ಕೊನೆಯ ಅಧ್ಯಾಯವನ್ನು ಸ್ವಾಮಿ ಶಾರದಾನಂದರಿಗೆ ಓದಿ ತೋರಿಸಿ, ಅವಶ್ಯಕವಾದ ತಿದ್ದುಪಡಿಗಳನ್ನು ಮಾಡಲು ನಾನು ಕಲ್ಕತ್ತೆಗೆ ಬಂದೆ.

ಈ ಸಂದರ್ಭದಲ್ಲಿ ಎರಡು ವಿಷಯಗಳು ನೆನಪಾಗುತ್ತವೆ. ಗುರುಮಹಾರಾಜರು ಸ್ವಾಮಿ ಶಾರದಾನಂದರನ್ನು ಗಣೇಶನ ಅಂಶದವನೆಂದು ಪರಿಗಣಿಸಿದ್ದರೆಂದು ನಾನು ನನ್ನ ಗ್ರಂಥದಲ್ಲಿ ಒಂದೆಡೆ ಹೇಳಿದ್ದೆ. ನಾನು ಬರೆದುದು ಕೇವಲ ಊಹೆಯಾಗಿರಬೇಕು. ಸ್ವಾಮಿಗಳು ನನ್ನನ್ನು ತಿದ್ದಿದರು. ತನ್ನನ್ನು ಶ್ರೀರಾಮಕೃಷ್ಣರ ಶಕ್ತಿ ಎಂದು ಪರಿಗಣಿಸುವಂತೆ ಶ್ರೀರಾಮಕೃಷ್ಣರು ತನಗೆ ಹೇಳಿದ್ದರೆಂದು ತಿಳಿಸಿದರು. ಇನ್ನೊಂದು ಘಟನೆ ಗುರುಮಹಾರಾಜರ ಕೊನೆಯ ಘಳಿಗೆಗೆ ಸಂಬಂಧಪಟ್ಟಿದ್ದು. ಆಗ ಗುರುಮಹಾರಾಜರ ದೇಹ ಮೂಳೆಯ ತಡಿಕೆಯಂತಾಗಿತ್ತು. ಅವರು ದೇಹತ್ಯಾಗ ಮಾಡಿದಾಗ ಕೂಡಲೆ ಒಂದು ಅವರ್ಣನೀಯ ಕಾಂತಿಯಿಂದ ತುಂಬಿತ್ತು ಎಂದು ಸನ್ಯಾಲ್ ಮಹಾಶಯ (ವೈಕುಂಠನಾಥ್ ಸನ್ಯಾಲ್) ಹೇಳಿದ್ದರು. ಯಥಾರ್ಥವಾದಿಯೂ, ಅನವಶ್ಯಕ ಭಾವಾತಿರೇಕವನ್ನು ಇಷ್ಟಪಡದವರೂ ಆದ ಸ್ವಾಮಿಗಳು, ಶಿಷ್ಯರು ದುಃಖತಪ್ತರಾಗಿದ್ದುದರಿಂದ, ಅವರು ಯಾರೂ ಯಾವ ಬೆಳಕನ್ನೂ ಕಾಣಲಿಲ್ಲವೆಂದು ಹೇಳಿದರು. ಅವರು ಹೇಳಿದ ಮತ್ತೊಂದು ಘಟನೆ ನನಗೆ ನೆನಪಿದೆ. ಕಲ್ಪತರು ದಿವಸದಂದು (ಶ್ರೀರಾಮಕೃಷ್ಣರು ೧೮೮೬ ರ ಜನವರಿ ೧ ರಂದು ಭಕ್ತರಿಗೆ ತಮ್ಮ ಅನುಗ್ರಹಶಕ್ತಿಯನ್ನು ವಿಶೇಷವಾಗಿ ಪ್ರಕಟಿಸಿದ ದಿನ) ಕಾಶೀಪುರ ತೋಟದಲ್ಲಿದ್ದ ಶಿಷ್ಯರನೇಕರು ಆನಂದಾತಿಶಯವನ್ನು ಅನುಭವಿಸಿದ್ದರು. ಏಕೆಂದರೆ ಗುರುಮಹಾರಾಜರು ಅವರ ಮೇಲೆ ತಮ್ಮ ಕೃಪಾಶೀರ್ವಾದಗಳನ್ನು ಹರಿಸಿದ್ದರು. ಆ ಸಮಯದಲ್ಲಿ ಇವರು ಏನು ಮಾಡುತ್ತಿದ್ದರು ಮತ್ತು ಆ ಮಹಾನ್‌ಘಟನೆಯನ್ನು ಇವರು ಕಂಡಿದ್ದರೆ ಎಂದು ನಾನು ಸ್ವಾಮಿ ಶಾರದಾನಂದರನ್ನು ಕೇಳಿದೆ. ಅವರು ಆ ಸಮಯದಲ್ಲಿ ಗುರುಮಹಾರಾಜರ ಕೋಣೆಯನ್ನು ಸಜ್ಜುಗೊಳಿಸುತ್ತಿದ್ದು ಆ ಘಟನೆಯನ್ನು ಕಿಟಕಿಯ ಮೂಲಕ ನೋಡಿದರೆಂದೂ, ಅದು ಅವರಿಗೆ ಅಂತಹುದೇನೂ ಹೊಸದಾಗಿರಲಿಲ್ಲವಾದ್ದರಿಂದ ಆ ಸ್ಥಳಕ್ಕೆ ಹೋಗಲು ಮನಸ್ಸಾಗಲಿಲ್ಲವೆಂದೂ ಅತ್ಯಂತ ಸಹಜ ರೀತಿಯಲ್ಲಿ ಹೇಳಿದರು.

'ಶ್ರೀರಾಮಕೃಷ್ಣರ ಜೀವನ' (ಇಂಗ್ಲಿಷ್ ಪುಸ್ತಕ) ಪ್ರಕಟವಾದಾಗ ನಾನೇ ಅದರ ಮೊದಲ ಪ್ರತಿಯನ್ನು ತೆಗೆದುಕೊಂಡುಹೋಗಿ ಸ್ವಾಮಿ ಶಾರದಾನಂದರಿಗೆ ಕೊಡುವಂತೆ ಸ್ವಾಮಿ ಮಾಧವಾನಂದಜಿ ಹೇಳಿದರು. ಅವರೂಡನೆ ನಾನು 'ಉದ್ಬೋಧನ'ಕ್ಕೆ ಹೋದೆ. ಅಂದು ಸ್ವಾಮಿಗಳ ಜನ್ಮದಿನ. ಪುಸ್ತಕವನ್ನು ನೋಡಿ ಅವರಿಗೆ ಅತ್ಯಂತ ಸಂತೋಷವಾಯಿತು. ಇಂಗ್ಲಿಷ್‌ನಲ್ಲಿ ಗುರುಮಹಾರಾಜರ ಜೀವನಚರಿತ್ರೆಯನ್ನು ಬರೆಯಲು ತಾವೂ ಅಪೇಕ್ಷಿಸಿದ್ದುದಾಗಿ ಹೇಳಿದರು. ಆದರೆ ಗುರುಮಹಾರಾಜರ ಇಚ್ಛೆಯೇ ಬೇರೆಯಾಗಿತ್ತು ಎಂದು ತಿಳಿಸಿದರು.

ಗುರುಮಹಾರಾಜರ ಪ್ರತ್ಯಕ್ಷ ಶಿಷ್ಯರ ಸೇವೆಯನ್ನು ಮಾಡುವಾಗ ಅಪೂರ್ವವಾದ ಕೃಪಾಶೀರ್ವಾದಗಳನ್ನು ಅನುಭವಿಸುತಿದ್ದೆನು ಎಂದು, ನಾನು ಮಾಯಾವತಿಯಲ್ಲಿದ್ದಾಗ, ಅಲ್ಲಿದ್ದ ಹಿರಿಯ ಸ್ವಾಮಿಗಳು ನನಗೆ ಹೇಳುತ್ತಿದ್ದರು. ಗುರುಮಹಾರಾಜರ ಯಾವ ಶಿಷ್ಯರೊಡನೆಯೂ ವಾಸ ಮಾಡುವಂತಹ ಅದೃಷ್ಟ ನನಗೆ ಇಲ್ಲವಲ್ಲ ಎಂದು ನನಗೆ ದುಃಖವಾಗುತ್ತಿತ್ತು. ಕಡೆಯ ಪಕ್ಷ ಅಂತಹ ಒಬ್ಬರೊಂದಿಗಾದರೂ ಇರುವಂತಾಗಲಿ ಎಂದು ನಾನು ಆಗಾಗ ಪ್ರಾರ್ಥಿಸುತ್ತಿದ್ದೆ. ಕೊನೆಗೆ ಬಹಳ ಕಾಲದ ನಂತರ ನನ್ನ ಆಸೆ ಈಡೇರಿತು. ರಾಜಪುಟಾಣ, ಗುಜರಾತ್, ಕಾಥಿಯಾವಾಡ ಮತ್ತು ಸಂಯುಕ್ತ ಸಂಸ್ಥಾನಗಳಲ್ಲಿ ಉಪನ್ಯಾಸ ಮಾಡಿ, ಆಗ ತಾನೇ ಪ್ರಾರಂಭವಾಗಿದ್ದ 'ಸಮನ್ವಯ' ಎಂಬ

ಹಿಂದಿ ನಿಯತಕಾಲಿಕೆಗಾಗಿ ಹಣ ಮತ್ತು ಚಂದಾದಾರರನ್ನು ಸಂಗ್ರಹಿಸಲು ನನ್ನನ್ನು ಸ್ವಾಮಿ ಮಾಧವಾನಂದಜಿ ಅಲ್ಲಿಗೆ ಕಳುಹಿಸಿದ್ದರು. ಹನ್ನೊಂದು ತಿಂಗಳ ಕಾಲ ಈ ಪ್ರವಾಸದಲ್ಲಿದ್ದು, ಅನೇಕ ರಾಜಮಹಾರಾಜರನ್ನೂ ಉನ್ನತಾಧಿಕಾರಿಗಳನ್ನೂ ಭೇಟಿ ಮಾಡಿ, ಕೊಲ್ಕತ್ತಾದ ಶಂಕರ್ ಘೋಷ್ ಲೇನ್‌ನಲ್ಲಿದ್ದ ಅದ್ವೈತ ಆಶ್ರಮದ ಶಾಖೆಗೆ ಹಿಂತಿರುಗಿದಾಗ ಮಧ್ಯಾಹ್ನ ಸುಮಾರು ನಾಲ್ಕು ಘಂಟೆಯಾಗಿತ್ತು. ಮಾರನೆ ಸಂಜೆ ಬನಾರಸ್‌ಗೆ ಹೊರಡಲಿದ್ದ ಸ್ವಾಮಿ ಶಾರದಾನಂದಜಿಗೆ ಪ್ರಣಾಮ ಸಲ್ಲಿಸಲು ನಾನು ಕೂಡಲೆ ಉದ್ಬೋಧನಕ್ಕೆ ಹೋಗಬೇಕೆಂದು ಸ್ವಾಮಿ ಮಾಧವಾನಂದರು ಹೇಳಿದರು. ಅನೇಕ ವರ್ಷಗಳ ಹಿಂದೆ ಸ್ವಾಮಿ ಶಾರದಾನಂದರು ಕಾಥಿಯಾವಾಡ ಮತ್ತು ಗುಜರಾತ್‌ಗೆ ಹೋಗಿದ್ದರು. ಅವರು ನನ್ನ ಅನುಭವಗಳನ್ನು ಕೇಳಬಯಸಿದರು. ತಾವು ಬನಾರಸ್‌ಗೆ ಹೋಗುತ್ತಿರುವುದಾಗಿ ತಿಳಿಸಿ, ಇದ್ದಕ್ಕಿದ್ದ ಹಾಗೆ ನನ್ನೊಡನೆ ಬರುವೆಯಾ ಎಂದು ಕೇಳಿದಾಗ ನನ್ನ ಕಿವಿಗಳನ್ನು ನಂಬುವುದೇ ನನಗೆ ಕಷ್ಟವಾಯಿತು. ಏಕೆಂದರೆ ನಾನು ದೀರ್ಘ ಕಾಲ ಬಯಸಿದ್ದ ಕನಸು ನನಸಾಗುವುದರಲ್ಲಿತ್ತು.

ಆಗ ನಾನು ಅದ್ವೈತ ಆಶ್ರಮದ ಸಿಬ್ಬಂದಿ ವರ್ಗದಲ್ಲಿದ್ದುದರಿಂದ ಸ್ವಾಮಿ ಮಾಧವಾನಂದರ ಅನುಮತಿಯನ್ನು ಕೇಳುವುದಾಗಿ ಹೇಳಿದೆ. ಅದರ ಬಗ್ಗೆ ನೀನು ಚಿಂತಿಸಬೇಕಾಗಿಲ್ಲವೆಂದು ಹೇಳಿ ತಮ್ಮ ಪ್ರಧಾನ ಸೇವಕರಾದ ಸಂವಿದಾನಂದರ ಮೂಲಕ ವಿಷಯ ತಿಳಿಸಿದಾಗ ಅವರಿಗೆ ಕಿರಿಕಿರಿ ಉಂಟಾಯಿತು. ಏಕೆಂದರೆ, ರಾಜ್‌ಕೋಟ್‌ನ ಕೇಂದ್ರಕ್ಕೆ ನನ್ನನ್ನು ಮುಖ್ಯಸ್ಥನನ್ನಾಗಿ ಮಾಡಿ ಒಂದು ಹೊಸ ಆಶ್ರಮವನ್ನು ತೆರೆಯಬೇಕೆಂದು ಅವರು ಯೋಜನೆ ಹಾಕಿಕೊಂಡಿದ್ದರು. ನನ್ನ ಬನಾರಸ್ ಪ್ರವಾಸವನ್ನು ರದ್ದುಗೊಳಿಸಲು ಉದ್ಬೋಧನಕ್ಕೆ ತಾವೆ ಧಾವಿಸಿದರು. ನಾನು ಮುಂದಿನ ಜನವರಿಯಲ್ಲಿ ಸ್ವಾಮಿಜಿಯ ಜನ್ಮೋತ್ಸವದ ನಂತರ ರಾಜ್‌ಕೋಟ್‌ಗೆ ಹೋಗಬಹುದೆಂದು ಸ್ವಾಮಿ ಶಾರದಾನಂದರು ಹೇಳಿದರು. ಸ್ವಾಮಿ ಶಾರದಾನಂದರೊಡನೆ ಇದ್ದ ಸೇವಕರೊಂದಿಗೆ ನಾನು ಬನಾರಸ್‌ಗೆ ಹೋದೆ. ಇದು ಬಹುಶಃ ನನ್ನ ಜೀವನದ ಅತ್ಯಂತ ಸಂತೋಷಕರ ಘಟ್ಟವಾಗಿತ್ತು.

ಅವರ ಕೋಣೆಯನ್ನು ಸ್ವಚ್ಛ ಮಾಡಿ ಅವರು ಬಳಸುತ್ತಿದ್ದ ತಟ್ಟೆ, ಬಟ್ಟಲುಗಳು ಮತ್ತು ಬಟ್ಟೆಗಳನ್ನು ಶುಭ್ರಗೊಳಿಸುವುದು ನನ್ನ ಮುಖ್ಯ ಕರ್ತವ್ಯವಾಗಿತ್ತು. ಬನಾರಸ್‌ನಲ್ಲಿ ಕಿರಣ ಬಾಬು ಅವರ ಮನೆಯ ಎರಡನೇ ಮಹಡಿಯಲ್ಲಿ ನಾವೆಲ್ಲರೂ ವಾಸವಾಗಿದ್ದೆವು. ಸೇವಕರು ಮೊದಲನೆಯ ಕೊಠಡಿಯಲ್ಲಿದ್ದರು, ಸ್ವಾಮಿ ಶಾರದಾನಂದರು ಮತ್ತು ಸನ್ಯಾಲ್ ಮಹಾಶಯ ಮಧ್ಯದ ಕೊಠಡಿಯಲ್ಲಿದ್ದರು ಹಾಗೂ ನಮ್ಮೊಡನೆ ಬಂದಿದ್ದ ಮಹಿಳೆಯರು ಕೊನೆಯ ಕೊಠಡಿಯಲ್ಲಿದ್ದರು. ಆಗಿನ ಅನೇಕ ಘಟನೆಗಳು ನನ್ನ ನೆನಪಿನಲ್ಲಿವೆ. ಒಂದು ದಿನ ನಮಗೆ ಊಟ ಬಡಿಸುತ್ತಿದ್ದ ಮಹಿಳೆಯೊಬ್ಬರು ನನಗೆ ಎರಡು–ಮೂರು ಲೂಚಿಗಳನ್ನು (ಪೂರಿ) ನೀಡಿದರು. ನನಗೆ ಇನ್ನು ತಿನ್ನಲು ಸಾಧ್ಯವಿಲ್ಲವೆಂದು ಹೇಳಿದೆ. ಸ್ವಾಮಿಗಳು



ಸ್ವಾಮಿ ನಿಖಿಲಾನಂದ

ಹೇಳಿದರು: "ಅವನ ಜೀರ್ಣಶಕ್ತಿಯನ್ನು ನೋಡಿ! ಮೂರು ಲೂಚಿಗಳಿಗಿಂತ ಹೆಚ್ಚಾಗಿ ಜೀರ್ಣಿಸಿಕೊಳ್ಳಲಾರ." ತಮ್ಮ ತಪಸ್ಸಿನ ದಿನಗಳಲ್ಲಿ ಹೃಷಿಕೇಶದಲ್ಲಿದ್ದಾಗ ಭಿಕ್ಷೆಯಿಂದ ಪ್ರತಿದಿನವೂ ಹದಿನೇಳು ಅಥವಾ ಹದಿನೆಂಟು ದಪ್ಪ ಚಪಾತಿಗಳು ಸಿಗುತ್ತಿದ್ದವೆಂದು ಹೇಳಿ "ನೀನು ಅಷ್ಟು ಕಡಿಮೆ ಆಹಾರ ಸೇವಿಸಿದರೆ ಧ್ಯಾನ ಮಾಡಲು ಹೇಗೆ ಸಾಧ್ಯ?" ಎಂದು ಕೇಳಿದರು.

ಒಂದು ದಿನ ತಮ್ಮ ಮೈಯನ್ನು ಒತ್ತಲು ನನಗೆ ಹೇಳಿದರು. ನನ್ನ ಅಂಗೈಗಳು ಬಹಳ ಬೆವರುವುದರಿಂದ, ಸ್ವಾಮಿ ಅಶೇಷಾನಂದರಿಗೆ ಒತ್ತಲು ಹೇಳಿದೆ. ಅಂತಹ ಸದವಕಾಶವನ್ನು ಕಳೆದುಕೊಂಡುದು ನನ್ನನ್ನು ಖಿನ್ನನನ್ನಾಗಿಸಿತು. ತೀವ್ರವಾದ ಸಾಧನೆಯ ಜೀವನವನ್ನು ನಡೆಸಲು ಹೃಷಿಕೇಶಕ್ಕೆ ಹೋಗಬೇಕೆಂದು ಕೆಲವೊಮ್ಮೆ ನನಗೆ ಅನ್ನಿಸುವುದೆಂದು ಸ್ವಾಮಿ ಶಾರದಾನಂದರಿಗೆ ಒಂದು ದಿನ ನಾನು ಹೇಳಿದೆ. ತಾವೇ ಅಂತಹ ಜೀವನವನ್ನು ಹಲವು ವರ್ಷಗಳ ಕಾಲ ನಡೆಸಿ, ನಂತರ ಅಮೆರಿಕಾದಿಂದ ಹಿಂತಿರುಗಿದ ಮೇಲೆ ರಾಮಕೃಷ್ಣ ಸಂಘದ ಕಾರ್ಯದರ್ಶಿಗಳಾದರೆಂದು ಹೇಳುತ್ತ, ನನಗೆ ಪ್ರೋತ್ಸಾಹ ನೀಡಲಿಲ್ಲ. ಮಿಷನ್ನಿನ ಶ್ರಮಪೂರಿತ ಕಾರ್ಯಗಳಲ್ಲಿ ತತ್ಪರರಾದರೂ, ಆ ಹೊಸ ಕೆಲಸಕಾರ್ಯಗಳು ತಮ್ಮ ಹಿಮಾಲಯದ ತಪಶ್ಚರ್ಯೆಗಿಂತ ಕಡಿಮೆ ಆಧ್ಯಾತ್ಮಿಕ ಮೌಲ್ಯವುಳ್ಳದ್ದೆಂದು ತಾವು ಎಂದೂ ಭಾವಿಸಿಲ್ಲವೆಂದು ಅವರು ಹೇಳಿದರು. "ಆದರೆ ನೀವು ಸಾಧನೆಯ ಜೀವನವನ್ನು ನಡೆಸಲು ಹಿಮಾಲಯಕ್ಕೆ ಹೋಗಿದ್ದಿರಿ" ಎಂದು ಹೇಳುತ್ತಾ ನಾನು ವಾದಮಾಡಲಾರಂಭಿಸಿದೆ. ತಕ್ಷಣವೇ ಅವರು ಉತ್ತರವಿತ್ತರು: "ನಾನು ಹಿಮಾಲಯಕ್ಕೆ ಹೋಗುವುದಕ್ಕೆ ಮುಂಚೆ ಯಾವ ವ್ಯಾಕುಲತೆಯನ್ನು ಅನುಭವಿಸಿದೆನೊ, ಅದನ್ನು ನೀನು ಅನುಭವಿಸಿದ್ದರೆ ನನ್ನ ಅನುಮತಿಯನ್ನು ನೀನು ಕೇಳುತ್ತಿರಲಿಲ್ಲ. ನನ್ನನ್ನು ಕೇಳದೆಯೇ ಹೊರಟುಹೋಗುತ್ತಿದ್ದೆ."

*(ಮುಂದುವರಿಯುವುದು)*